Reg. No. | | | | | | | | | | | |

# BBAKALN 401

## IV Semester B.B.A. Degree Examination, July/August 2023
## (NEP 2020) (2022 – 23 Batch Onwards)
## KANNADA LANGUAGE (AECC)

Time : 2 Hours　　　　Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಗಿಳಿಯ ಮರಿ ತಂದೆ ತಾಯಿಯನ್ನು ಕಳೆದುಕೊಂಡು ಅನಾಥವಾದ ಬಗೆಯನ್ನು ವಿವರಿಸಿರಿ.

**ಅಥವಾ**

ಗಾಂಧೀಜಿಯ ಘನ ವ್ಯಕ್ತಿತ್ವ 'ದಿವ್ಯಜ್ಯೋತಿ' ಕವಿತೆಯಲ್ಲಿ ಅನಾವರಣಗೊಂಡ ಬಗೆಯನ್ನು ವಿವರಿಸಿರಿ.

2) ಬಡತನದ ದಾರುಣತೆಯು 'ಓಡುವ ಗಿಡಮರಗಳೊಂದಿಗೆ' ಕಥೆಯಲ್ಲಿ ಸೂಕ್ಷ್ಮವಾಗಿ ಚಿತ್ರಿತವಾದ ಬಗೆ ಹೇಗೆ ?

**ಅಥವಾ**

ವನ್ಯಜೀವಿಗಳ ಬದುಕಿನ ಕ್ರಮ 'ಕಾಡಿನಲ್ಲಿ ಕಂಡದ್ದು' ಲೇಖನದಲ್ಲಿ ಹೇಗೆ ನಿರೂಪಿತವಾಗಿದೆ ? ವಿವರಿಸಿರಿ.

3) 'ಕೋಟಿ ಚೆನ್ನಯ' ಗದ್ಯಭಾಗದಲ್ಲಿ ಆ ಕಾಲದ ವರ್ಗ, ಜಾತಿ ಸಂಘರ್ಷದ ಸಾಮಾಜಿಕ ಧ್ವನಿಗಳು ಕಾಣಸಿಗುತ್ತವೆ. ವಿಶ್ಲೇಷಿಸಿರಿ.

**ಅಥವಾ**

ಪೆರುಮಾಳು ಬಲ್ಲಾಳನಿಗೆ ಬಂದೊದಗಿದ ಸಂಕಷ್ಟ ಯಾವುದು ? ಅದರಿಂದ ಅವನು ಪಾರಾದ ಬಗೆ ಹೇಗೆ ?

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(3×5=15)**

1) 'ಗ್ನಾನದ್ ದೀಪ' ಕವನದ ಆಶಯ–ಸ್ವಾರಸ್ಯಗಳನ್ನು ನಿರೂಪಿಸಿರಿ.

**ಅಥವಾ**

ಜೀತದ ಹುಡುಗನ ಯಾತನೆ–ಹತಾಶೆಗಳನ್ನು ಕವಿ ದೊಡ್ಡರಂಗೇಗೌಡರು ಹೇಗೆ ಚಿತ್ರಿಸಿದ್ದಾರೆ ?

2) ಖಾಸಗಿ ಕಂಪೆನಿಗಳ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಾನವೀಯತೆ ಮರೆದ ಬಗೆಯನ್ನು 'ಶೇಷ ಪ್ರಶ್ನೆ' ಕಥೆ ಹೇಗೆ ಚಿತ್ರಿಸಿದೆ ?

**ಅಥವಾ**

ಕನ್ನಡ ಭಾಷೆಯ ಮುಂದಿರುವ ಆತಂಕಗಳನ್ನು ಕಿ.ರಂ. ನಾಗರಾಜ್ ಹೇಗೆ ವಿಶ್ಲೇಷಿಸಿದ್ದಾರೆ ?

3) ಕೋಟಿಚೆನ್ನಯರು ತಮ್ಮ ಸೋದರಿ ಕಿನ್ನಿದಾರುವನ್ನು ಮೊದಲ ಬಾರಿ ಭೇಟಿ ಮಾಡಿದ ಪ್ರಸಂಗವನ್ನು ನಿರೂಪಿಸಿ.

**ಅಥವಾ**

ಕೋಟಿಚೆನ್ನಯರು ಪಂಜ ಸೀಮೆಯಲ್ಲಿ ಸೆರೆಯಾದ ತದನಂತರ ಪಾರಾದ ಪ್ರಸಂಗವನ್ನು ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಮತ್ತು ಸ್ವಾರಸ್ಯವನ್ನು ವಿವರಿಸಿರಿ. **(1×5=5)**

ಅಂತಶ್ರುತ ಪೂರ್ವಧ್ವನಿ
ಯಂ ತೊಟ್ಟನೆ ಕೇಳ್ದು ಕೇಳ್ದು ಕಿವಿಯೊಡೆದಪುದೆಂ
ಬಂತಾಗೆ ಘೀಳಿಡಲ್ವೊ
ಕ್ಕಂ ತಂದೆಯ ಶಿಥಿಲ ಪಕ್ಷಸಂಪುಟದೆಡೆಯೊಳ್

**ಅಥವಾ**

ಮರವಿದ್ದು ಫಲವೇನು ? ನೆಳಲಿಲ್ಲದನ್ನಕ !
ಧನವಿದ್ದು ಫಲವೇನು ದಯವಿಲ್ಲದನ್ನಕ ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ ?
ಚೆನ್ನಮಲ್ಲಿಕಾರ್ಜುನ !

IV. ಯಾವುದಾದರೂ **ಎರಡರ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ನಿರೂಪಿಸಿರಿ : **(4×2=8)**

1) ಬೆಳ್ಳಿ ಬಟ್ಟಲಲ್ಲಿ ಕೈ ತುತ್ತನ್ನು ತಿನ್ನಿಸಲಿಲ್ಲ ನನ್ನಮ್ಮ
2) ನಾನು ಲಕ್ಷ್ಮಣ ರೇಖೆ ದಾಟಲಾರೆ
3) ಖಂಡುಗ ಖಂಡುಗ ಸಂಪಾದಿಸುವಾಸೆ ಇತ್ತು
4) ಅವನು ಗೈದ ಲೀಲೆಯಲಿ ಲಯಿಸಿತಂಥವರ 'ನ್ಹಾನ್ನು-ನಾನು'

V. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (1×8=8)

1) 'ಕರ್ಣಾಟಕ ಕಾದಂಬರಿ' ಯ ಕರ್ತೃ ಯಾರು ?

2) ಅಕ್ಕಮಹಾದೇವಿಯ ಜನ್ಮಸ್ಥಳ ಯಾವುದು ?

3) ಕವಿ ದೊಡ್ಡರಂಗೇಗೌಡರಿಗೆ ದೊರೆತ ಅತ್ಯುನ್ನತ ಪ್ರಶಸ್ತಿ ಯಾವುದು ?

4) 'ಉರಿವ ಏಕಾಂತ ದೀಪ' ಯಾರ ಕವನ ಸಂಕಲನ ?

5) ಕಾ.ತ. ಚಿಕ್ಕಣ್ಣ ಯಾವ ಬಗೆಯ ಅನುಭವಗಳನ್ನು ಕಥೆಗಳನ್ನಾಗಿಸುವಲ್ಲಿ ಸಿದ್ಧಹಸ್ತರು ?

6) ಕಿ.ರಂ. ನಾಗರಾಜ್ ಅವರ ಪೂರ್ಣ ನಾಮಧೇಯವೇನು ?

7) ಕೋಟಿಚೆನ್ನಯರ ಆರಾಧನಾ ತಾಣವನ್ನು ಏನೆಂದು ಕರೆಯುವರು ?

8) ಕೋಟಿಚೆನ್ನಯರು ಕಾಲವಾದ ದಿನ ಎಲ್ಲಿಯ ಜಾತ್ರೆ ನಡೆದಿತ್ತು ?

---